**ಮೂ.ದಾ.ನಂ. 146/2018**

ಪಿ.ಡಬ್ಲ್ಯು.1

(ಇಂದು ದಿನಾಂಕ: 10–**08–2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ. ಪಿ.ಎನ್.ಎಚ್. ವಕೀಲರಿಂದಃ**

ದಾವಾ ಸ್ಥಳ ಯಾವ ಸರ್ವೆ ನಂಬರಗೆ ಸಂಭಂಧಪಟ್ಟಂತೆ ದಾವೆಯನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿಯು ನನಗೆ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವೆಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ನಾನೇ ವಕೀಲರಿಗೆ ನೀಡಿರುತ್ತೇನೆ. ಸರ್ವೆ ನಂಬರ 95 ಹಿಸ್ಸಾ 1 ರಲ್ಲಿ 20 ಗುಂಟೆ ಜಾಗದಲ್ಲಿ ವಾದಿ ಹಾಗೂ ಪ್ರತಿವಾದಿಯರು ಸೇರಿ ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಬೇರೆ ಬೇರೆಯಾಗಿ ವಹಿವಾಟು ಮಾಡಿಕೊಂಡು ಬಂದಿರುವುದಾಗಿ ನುಡಿಯುತ್ತಾರೆ. ಸದ್ರಿ ದಾವಾ ಸ್ಥಳದಲ್ಲಿ ಅಡಿಕೆ ತೋಟವನ್ನು ಮಾಡಿರುತ್ತೇವೆ. ಸದ್ರಿ ದಾವಾ ಸ್ಥಳದಲ್ಲಿ ಪ್ರತಿವಾದಿಯರಿಗೆ 2/3 ಅಂಶ ಹಕ್ಕು ಇದೆ ಹಾಗೂ ನನಗೆ 1/3 ಅಂಶ ಹಕ್ಕು ಇದೆ ಎಂದರೆ ಸರಿ. ಪ್ರತಿವಾದಿಯರಿಗೆ 2/3 ಅಂಶ ಹಕ್ಕು ಇದ್ದು ಅವರಿಗೆ ವಿಭಾಗ ಮಾಡಿಕೊಳ್ಳಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಉಳಿದ ಕುಟುಂಬದ ಆಸ್ತಿಗಳಿಗೆ ದಸ್ತಾವೇಜ ಮೂಲಕ ವಿಭಾಗ ಮಾಡಿಕೊಂಡಿದ್ದು ಇರುತ್ತದೆ ಎಂದರೆ ಸರಿ.

ಸರ್ವೆ ನಂಬರ 95 ಹಿಸ್ಸಾ 1 ರಲ್ಲಿ 20 ಗುಂಟೆ ಜಾಗದಲ್ಲಿರುವ ಅಡಿಕೆ ತೋಟದಲ್ಲಿ ಪ್ರತ್ಯೇಕ ಪ್ರತ್ಯೇಕ ವಿಂಗಡಣೆ ಮಾಡಿಕೊಂಡು ವಹಿವಾಟು ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿ. ತುಳಸಿ ಕಟ್ಟೆ ಇರುವಂತಹ ಜಾಗದ ಪೂಜೆ ಪುನಸ್ಕಾರ ನಾನೇ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿ. ತುಳಸಿ ಪೂಜೆ ಮನೆಯ ಹಿರಿಯ ವ್ಯಕ್ತಿಗಳು ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಮನೆಯ ದೇವರು ನನ್ನ ಬಳಿ ಇದ್ದು ನಾನೇ ಮಾಡಿಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ.

**ಮೂ.ದಾ.ನಂ. 146/2018**

ಪಿ.ಡಬ್ಲ್ಯು.1

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ